ಅ) ಅದಕ್ಕೆ ತಗಲಿದ ಅಂದಾಜು ವೆಚ್ಚವೆಷ್ಟು?

ಇ) ಈಗ ಆ ಕಟ್ಟಡ ಪೂರ್ಣಗೊಳ್ಳದೆ ಅರ್ಧಕ್ಕೆ ನಿಲ್ಲಲು ಕಾರಣವೇನು?

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುತ್ ಮತ್ತು ಕೈಗಾರಿಕಾ ಸಚಿವರು).—

ಅ) ಮೇ ೧೯೭೭ರಲ್ಲಿ

ಆ) ಶಾಖಾಧಿಕಾರಿಗಳ ಕಚೇರಿಗೆ ರೂ. ೩೫೦೦೦ ವಸತಿಗೆ ರೂ. ೩೨೦೦೦

ಇ) ಕಲಸವನ್ನು ತೆಗೆದುಕೊಂಡಿದ್ದ ಗುತ್ತಿಗೆದಾರರು ಅದನ್ನು ಪೂರ್ಣಗೊಳಿಸಲಿಲ್ಲ. ಮತ್ತೆ ಟೆಂಡರ್ ಕರೆದು ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಧಾರವಾಡದ ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳಿ ಘಟಕದಲ್ಲಿ ಉತ್ಪಾದಿಸುವ ಹಾಲಿನ ಪ್ರಮಾಣದ ಬಗ್ಗೆ

೬೫೫ (ಡಿ) ಶ್ರೀ ಚಂದ್ರಕಾಂತಬೆಲ್ಲದ.—ಪಾನ್ಯ ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದ ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳಿ ಘಟಕದಲ್ಲಿ ಉತ್ಪಾದಿಸುವ ಪ್ರತಿ ದಿನದ ಹಾಲಿನ ಪ್ರಮಾಣವೆಷ್ಟು, ಘಟಕದ ಉತ್ಪಾದನೆಯ ಗರಿಷ್ಠ ಪ್ರಮಾಣವೆಷ್ಟು.

ಆ) ಧಾರವಾಡ ಜಿಲ್ಲೆ ಒಂದರಿಂದಲೇ ಪ್ರತಿ ದಿವಸ ಎಷ್ಟು ಪ್ರಮಾಣದ ಹಾಲು ಸಂಗ್ರಹವಾಗುತ್ತದೆ ಹಾಗೂ ಉಳಿದ ಪ್ರತ್ಯೇಕ ಜಿಲ್ಲೆಗಳಿಂದ ಬರುವ ಹಾಲಿನ ಪ್ರಮಾಣವೆಷ್ಟು?

ಇ) ಹಾಲು ಸಾಗಾಣಿಕೆಗೆ ಆಗುತ್ತಿರುವ ವಾರ್ಷಿಕ ಖರ್ಚು ಎಷ್ಟು. ಧಾರವಾಡದ ಸುತ್ತ ಮುತ್ತಲಿನ ತಾಲ್ಲೂಕುಗಳಲ್ಲಿ ಹಾಲು ಉತ್ಪಾದಿಸಲು ಯೋಜನೆ ಯಾವ ದಿಶೆಯಲ್ಲಿದೆ,

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ಧಾರವಾಡದ ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳಿಯು ರಾಯಪುರ ಡೈರಿ ದಿನ ಪೂಂದಕ್ಕೆ ೨೨.೩೫೭ ಲೀಟರ್ ಹಾಲನ್ನು ಸಂಸ್ಕರಿಸುತ್ತಿದೆ. ಈ ಘಟಕದ ಸ್ಥಾಪಿತ ಸಂಸ್ಕರಣಾ ಸಾಮರ್ಥ್ಯವು ದಿನವೊಂದಕ್ಕೆ ೧೦,೦೦೦ ಲೀಟರ್‌ಗಳಾಗಿರುತ್ತದೆ

ಆ) ಧಾರವಾಡ ಜಿಲ್ಲೆ ಒಂದರಿಂದಲೇ ಪ್ರತಿ ದಿನ ಸರಾಸರಿ ೧೩,೫೫೦ ಕೆ.ಜಿ. ಹಾಲು ಸಂಗ್ರಹವಾಗುತ್ತದೆ. ಹಾಗೂ ಉತ್ತರ ಕನ್ನಡ ಜಿಲ್ಲೆಯಿಂದ ಪ್ರತಿದಿನ ಸರಾಸರಿ ೩,೬೦೦ ಕೆ.ಜಿ. ಹಾಲು ಸಂಗ್ರಹವಾಗುತ್ತದೆ.

ಇ) ಹಾಲು ಸಾಗಾಣಿಕೆಗೆ ೧೯೮೫-೮೬ನೇ ಸಾಲಿನಲ್ಲಿ ೨೦,೫೯,೫೫೫-೭೬ ರೂಪಾಯಿಗಳು ಖರ್ಚಾಗಿರುತ್ತದೆ. ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲು, ತಳಿ ಅಭಿವೃದ್ಧಿ ಪಡಿಸಲು ಧಾರವಾಡ ಜಿಲ್ಲೆಯಲ್ಲಿ ೮೧ ಘನೀಕೃತ ವೀರ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇದರ ಜೊತೆಗೆ ಹಾಲಿನ ಸಹಕಾರ ಸಂಘಗಳಿಗೆ ಸಮತೋಲನವಾದ ಪಶು ಆಹಾರವನ್ನು ಪೂರೈಸಿ ಮಾಡಲಾಗುತ್ತಿದೆ. ಹಸಿರು ಹುಲ್ಲನ್ನು ಬೆಳೆಯುವ ರೈತರಿಗೆ ಹುಲ್ಲಿನ ಬೀಜ ಮತ್ತು ಬೇರುಗಳನ್ನು ಧಾರವಾಡದ ಹಾಲು ಒಕ್ಕೂಟದ ಮತಿಯಿಂದ ಉಚಿತವಾಗಿ ನೀಡುವುದರ ಜೊತೆಗೆ ವಿವಿಧ ಯೋಜನೆಗಳಡಿಯಲ್ಲಿ ರೈತರಿಗೆ ಹಸು ಎಮ್ಮೆಗಳನ್ನು ಕೊಳ್ಳಲು ಸಾಲ ಸೌಲಭ್ಯಗಳನ್ನು ಸಹ ಒದಗಿಸುವುದರ ಮುಖೇನ ಪ್ರೋತ್ಸಾಹ ನೀಡಲಾಗುತ್ತಿದೆ.

ರಾಜ್ಯದಲ್ಲಿ ವಿದ್ಯುತ್ ಸರಬರಾಜಿನ ಸ್ಥಿತಿ ಮತ್ತು ಕೊರತೆಯ ಬಗ್ಗೆ

೬೪೭. ಶ್ರೀ ಪಂಪಾವತಿ.—ಪಾನ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿದ್ಯುತ್ ಸರಬರಾಜಿನ ಸ್ಥಿತಿ ಮತ್ತು ವಿದ್ಯುತ್ತಿನ ಕೊರತೆಯ ಪ್ರಮಾಣ ಏನು?

ಆ) ಕೈಗಾರಿಕೆಗಳ ಮೇಲೆ ವಿಧಿಸಿರುವ ವಿದ್ಯುತ್ ಕಡಿತವನ್ನು ಯಾವ ದಿನಾಂಕದಿಂದ ಬಿಡಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೧೯೮೬-೮೭ನೇ ಸಾಲಿನಲ್ಲಿ (೧-೪-೮೬ ರಿಂದ ೩೧-೩-೮೭ರವರೆಗೆ) ಹಾಲಿ ವಿದ್ಯುತ್ ಉಪಯೋಗವಾಗುತ್ತಿರುವ ಪ್ರಮಾಣದ ಆಧಾರದ ಮೇಲೆ ಸುಮಾರು ೧೪,೮೫೫ ಮಿಲಿಯನ್ ಯೂನಿಟ್‌ಗಳು ಬೇಕಾಗುತ್ತದೆಂದು ನಿರೀಕ್ಷಿಸಲಾಗಿದೆ. ಇದೇ ಅವಧಿಯಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್, ನೆರೆ ರಾಜ್ಯಗಳಿಂದ ಆಮದು ಮತ್ತು ಕೇಂದ್ರ ಯೋಜನೆಗಳಿಂದ ರಾಜ್ಯದ ಪಾಲು ಎಲ್ಲಾ ಒಂದಾಗಿ ಒಟ್ಟಿಗೆ ಸೇರಿಸಿದರೂ ಸುಮಾರು ೧೧,೦೦೦ ಮಿಲಿಯನ್ ಯೂನಿಟ್‌ಗಳು ದೊರಕಬಹುದೆಂದು ನಿರೀಕ್ಷಿಸಲಾಗಿದೆ ಆದ್ದರಿಂದ ವಿದ್ಯುತ್ ಕೊರತೆಯ ಪ್ರಮಾಣ ೩,೮೫೫ ಮಿಲಿಯನ್ ಯೂನಿಟ್‌ಗಳಾಗಬಹುದೆಂದು ನಿರೀಕ್ಷಿಸಲಾಗಿದೆ.

ಈ ವರ್ಷದಲ್ಲಿ ಲಿಂಗನಮಕ್ಕಿ ಮತ್ತು ಸೂಫಾ ಜಲಾಶಯಗಳಿಗೆ ಬರುತ್ತಿರುವ ನೀರಿನ ಪ್ರಮಾಣ ನಿರೀಕ್ಷಿಸಿದಕ್ಕಿಂತಲೂ ಬಹಳ ಕಡಿಮೆಯಾಗಿದೆ. ವಿದ್ಯುತ್ ಸರಬರಾಜಿನ ಸ್ಥಿತಿ ಮತ್ತು ಕೊರತೆಯ ಪ್ರಮಾಣವನ್ನು ಸೆಪ್ಟೆಂಬರ್ ೮೬ರ ಕೊನೆಯ ವೇಳೆಗೆ ಅಂದಾಜು ಮಾಡಲು ಸಾಧ್ಯವಾಗುತ್ತದೆ.

ಆ) ಕೈಗಾರಿಕೆಗಳಿಗೆ ಈಗ ಹಾಲಿ ವಿಧಿಸಿರುವ ವಿದ್ಯುತ್ತಿನ ಕಡಿತವನ್ನು ಸಡಿಲಗೊಳಿಸುವ ಸಾಧ್ಯತೆ ಯೆನ್ನು ಪವರ್ ರೆವ್ಯೂ. ಕಮಿಟಿಯ ಸಲಹೆಯ ಮೇಲೆ ಸರ್ಕಾರ ನಿರ್ಣಯ ಪ್ರಕಟಿಸುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ವೀರಣ್ಣ (ಸಾರಿಗೆ ಮಂತ್ರಿಗಳು).—ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಒಂಭತ್ತನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಯಿತು.

ಕರ್ನಾಟಕ ರಾಜ್ಯದ ಸಾರ್ವಜನಿಕ ಉದ್ದಿಮೆಗಳ ಲಾಭ ನಷ್ಟಗಳ ಬಗ್ಗೆ

೧೬೨. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವಿವಿಧ ಸಾರ್ವಜನಿಕ ಉದ್ಯಮಗಳ ಸಂಖ್ಯೆ ಎಷ್ಟು, ಹಾಗೂ ಅವುಗಳ ಹೆಸರೇನು?

ಆ) ೧೯೮೫-೮೬ ಹಾಗೂ ೧೯೮೬-೮೭ರಲ್ಲಿ ಮೇಲ್ಕಂಡ ಉದ್ಯಮಗಳು ಗಳಿಸಿರುವ ಲಾಭದ ಮೊತ್ತವೆಷ್ಟು, ಮತ್ತು ಲಾಭದಲ್ಲಿ ನಡೆಯುತ್ತಿರುವ ಉದ್ಯಮಗಳ ಸಂಖ್ಯೆ ಎಷ್ಟು?

ಇ) ೧೯೮೫-೮೬, ೧೯೮೬-೮೭ರಲ್ಲಿ ಮೇಲ್ಕಂಡ ಉದ್ಯಮಗಳಲ್ಲಿ ಆಗಿರುವ ನಷ್ಟ ಹಾಗೂ ಅದರಿಂದ ಉಂಟಾದ ಹಾನಿ ಎಷ್ಟು?

ಈ) ಅವಶ್ಯಕತೆಗಿಂತ ಹೆಚ್ಚಾಗಿರುವ ನೌಕರರು ಅಥವಾ ಅಧಿಕಾರಿಗಳಿರುವ ಉದ್ಯಮಗಳ ಸಂಖ್ಯೆ ಎಷ್ಟು, ಹಾಗೂ ಆ ಉದ್ಯಮಗಳ ಹೆಸರುಗಳೇನು ?

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ ೫೨ ಅವುಗಳ ಹೆಸರುಗಳನ್ನು ಅನುಬಂಧ ೧ರಲ್ಲಿ ಕೊಡಲಾಗಿದೆ.